Indian Journal Of History and Archaeology

INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -4, November-December, 2021,
PageNo,71-81
Peer Reviewed Journal, Referred Journal

IJHA JOURNALS
www.IJHA.IN

# ಬುದ್ಧ ಪ್ರಜ್ಞೆಯ ಪ್ರಗತಿಪರ ಚಳುವಳ

**ಡಾ.ಹೆಚ್.ಎನ್.ಕಾಳಸ್ವಾಮಿ.**[1]

ಕ್ರಿ.ಪೂ. ಆರನೇ ಶತಮಾನದ ಭಾರತದಲ್ಲಿ ಮತ್ತು ಅದಕ್ಕೂ ಪೂರ್ವದಲ್ಲಿ ಉತ್ತರ ಭಾರತದ ಪ್ರದೇಶವು ಒಂದು ಸಾರ್ವಭೌಮ ಸಾಮ್ರಾಜ್ಯವಾಗಿರಲಿಲ್ಲ. ಭಾರತ ದೇಶವು ಆಗ ಅನೇಕ ರಾಜ್ಯಗಳಾಗಿ ವಿಂಗಡಿಸಿ ಹೋಗಿತ್ತು. ಅವುಗಳಲ್ಲಿ ಸಣ್ಣ ಮತ್ತು ದೊಡ್ಡ ರಾಜ್ಯಗಳು ಸಹ ಅಸ್ತಿತ್ವದಲ್ಲಿದ್ದವು. ಕೆಲವು ರಾಜ್ಯಗಳು ಪ್ರಭುತ್ವಕ್ಕೆ ಒಳಪಟ್ಟಿದ್ದರೆ, ಮತ್ತೆ ಕೆಲವು ರಾಜ್ಯಗಳು ಪ್ರಭುತ್ವ ವ್ಯವಸ್ಥೆಗೆ ಒಳಪಟ್ಟಿರಲಿಲ್ಲ. ಒಟ್ಟು ಹದಿನಾರು ರಾಜ್ಯಗಳು ಮಾತ್ರ ರಾಜಪ್ರಭುತ್ವ ವ್ಯವಸ್ಥೆಗೆ ಒಳಪಟ್ಟಿದ್ದವು. ಆ ರಾಜ್ಯಗಳೆಂದರೆ ಅಂಗ, ಮಗಧ, ಕಾಶಿ, ಕೋಸಲ, ವಜ್ರ, ಮಲ್ಲ, ಛೇದಿ, ವತ್ಸ, ಕುರು, ಪಾಂಚಾಲ, ಮತ್ಸ್ಯ, ಕೌರಸೇನ, ಅಸ್ಸಾಕ, ಆವಂತಿ, ಗಾಂಧಾರ, ಕಾಂಬೋಜ, ರಾಜಪ್ರಭುತ್ವದ ಹೊರತಾಗಿ ಕಪಿಲ ವಸ್ತುವಿನ ಶಾಕ್ಯರು, ಪವದ ಮಲ್ಲರು, ಕುಶಿನಾರರು, ವೈಶಾಲಿಯ ಅಛ್ಚವಿಗಳು, ಮಿಥಾಲೆಯ ವಿದೇಹಿಗರು, ರಾಮಗಾಮದ ಕೊಲಿಯರು, ಪಕ್ಕ'ದ ಬುಲಿಗಳು, ರೇಸು ಪುಟ್ಟದ ಕಳಿಂಗರು, ಪಿಪ್ಪಲವನದ ಮೌರ್ಯರು ಹಾಗೂ ಸುಸ'ಂಮಾರ ಎಂಬ ಬೆಟ್ಟದ ಮೇಲೆ ತಮ್ಮ ರಾಜಧಾನಿಯನ್ನು ಸ್ಥಾಪಿಸಿಕೊಂಡಿದ್ದ ಭಗ್ಗರು ಮುಖ್ಯರಾಗಿದ್ದರು. ರಾಜರ ಆಳ್ವಿಕೆಗೆ ಸೇರಿದ್ದ ರಾಜ್ಯಗಳನ್ನು ಜನಪದ ಎಂತಲೂ, ರಾಜಪ್ರಭುತ್ವಕ್ಕೆ ಒಳಪಡದ ರಾಜ್ಯಗಳನ್ನು ಸಂಘ ಅಥವಾ ಗಣಗಳು ಎಂದೂ ಕರೆಯಲಾಗುತ್ತಿತ್ತು. ಶಾಕ್ಯರು ವಾಸಿಸುತ್ತಿದ್ದ ಕಪಿಲ ವಸ್ತುವಿನ ರಾಜಕೀಯ ವ್ಯವಸ್ಥೆ ಕುರಿತಂತೆ ಹೆಚ್ಚಿನ ಮಾಹಿತಿ ದೊರಕಿಲ್ಲ. ಅದು ಗಣತಂತ್ರ ವ್ಯವಸ್ಥೆಗೆ ಒಳಪಟ್ಟಿತ್ತೋ ಅಥವಾ ಸಣ್ಣ ಪಂಗಡವಾಗಿ ಅಸ್ತಿತ್ವದಲ್ಲಿತ್ತೋ ಎಂಬ ಬಗ್ಗೆ ಹೆಚ್ಚೇನೂ ತಿಳಿದಿಲ್ಲ.

ಶಾಕ್ಯರಲ್ಲಿ ಆಡಳಿತ ನಡೆಸುತ್ತಿದ್ದ ಅನೇಕ ಕುಟುಂಬಗಳು ಸರದಿಯ ಪ್ರಕಾರ ರಾಜ್ಯಾಡಳಿತವನ್ನು ನಡೆಸುತ್ತಿದ್ದವು ಎಂಬುದು ಮಾತ್ರ ಖಚಿತವಾಗಿ ತಿಳಿದು ಬಂದಿದೆ. ಆಡಳಿತ ನಡೆಸುತ್ತಿದ್ದ ಕುಟುಂಬದ ಮುಖ್ಯಸ್ಥನು ರಾಜ ಎಂದು ಕರೆಯುವ ಪದ್ಧತಿ ರೂಢಿಯಲ್ಲಿತ್ತು. ಸಿದ್ಧಾರ್ಥ ಗೌತಮನು ಜನಿಸಿದ ಸಮಯದಲ್ಲಿ ಅವನ ತಂದೆಯಾದ ಶುದ್ಧೋಧ'ನನು ಸರದಿಯ ಪ್ರಕಾರ ರಾಜನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಶಾಕ್ಯರ ರಾಜ್ಯವು ಈಶಾನ್ಯ ಭಾರತದ ಭಾಗದಲ್ಲಿ ಒಂದು ಸ್ವತಂತ್ರ ರಾಜ್ಯವಾಗಿತ್ತು.

---

[1].**ಸಂಶೋಧನಾ ಸಹಾಯಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.**

ನಂತರದ ವರ್ಷಗಳಲ್ಲಿ ಈ ರಾಜ್ಯವು ಕೋಸಲ ದೇಶದ ರಾಜನ ಆಳ್ವಿಕೆಗೆ ಒಳಪಟ್ಟಿತ್ತು. ಕೋಸಲದ ರಾಜನು ಶಾಕ್ಯರ ಮೇಲೆ ದಾಳಿ ಮಾಡಿ, ಅವರ ಮೇಲೆ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದನು. ಕೋಸಲವು ರಾಜ ಪ್ರಭುತ್ವಕ್ಕೆ ಒಳಪಟ್ಟ ನಂತರ ಶಾಕ್ಯರ ರಾಜ್ಯವು ಕೋಸಲ ರಾಜನ ಒಪ್ಪಿಗೆಯಿಲ್ಲದೇ ಶಾಕ್ಯರು ಯಾವುದೇ ರೀತಿಯ ಪರಮಾಧಿಕಾರವನ್ನು ಚಲಾಯಿಸುವಂತಿರಲಿಲ್ಲ. ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ರಾಜ್ಯಗಳಲ್ಲಿ ಕೋಸಲ ರಾಜ್ಯವು ಅತ್ಯಂತ ಬಲಿಷ್ಠವಾಗಿತ್ತು. ಅದೇ ರೀತಿಯಲ್ಲಿ ಮಗಧ ಸಾಮ್ರಾಜ್ಯವು ಪ್ರಬಲವಾಗಿತ್ತು. ಕೋಸಲ ಸಾಮ್ರಾಜ್ಯದ ದೊರೆ ಪಸನೇದಿ ಮತ್ತು ಮಗಧ ಸಾಮ್ರಾಜ್ಯದ ದೊರೆ ಬಿಂಬಸಾರ ಈ ಇಬ್ಬರೂ ಸಿದ್ಧಾರ್ಥ ಗೌತಮನ ಸಮಕಾಲೀನರಾಗಿದ್ದರು.

ಕಪಿಲವಸ್ತು ಎಂಬ ನಗರ ಶಾಕ್ಯ ರಾಜ್ಯದ ರಾಜಧಾನಿಯಾಗಿತ್ತು. ಪ್ರಾಚೀನ ಭಾರತದ ಮಹಾನ್ ವಿಚಾರವಾದಿ ಕಪಿಲನಿಂದಾಗಿ ಬಹುಷ ಈ ಹೆಸರು ಬಂದಿರಬೇಕೆಂದು ಊಹಿಸಲಾಗಿದೆ. ಕಪಿಲವಸ್ತು ನಗರದಲ್ಲಿ ಜಯಸೇನ ಎಂಬ ಹೆಸರಿನ ಒಬ್ಬ ಶಾಕ್ಯನಿದ್ದನು. ಆತನಿಗೆ ಸಿನಹು ಎಂಬ ಪುತ್ರನಿದ್ದನು. ಅವನಿಗೆ ಕಚ್ಚಣ ಎಂಬ ಹೆಣ್ಣಮಗಳೊಂದಿಗೆ ವಿವಾಹವಾಗಿತ್ತು. ಸಿನಹು ಮತ್ತು ಕಚ್ಚಣ ದಂಪತಿಗೆ ಶುದ್ಧೋಧನ, ದೋತೋಧನ, ಸಕ್ಕೋಧನ, ಸುಕ್ಲೋಧನ, ಅಮಿತೋಧನ ಎಂಬ ಐದು ಜನ ಪುತ್ರರು ಹಾಗೂ ಅಮಿತಾ ಮತ್ತು ಪಮಿತಾ ಎಂಬ ಇಬ್ಬರು ಪುತ್ರಿಯರಿದ್ದರು. ಆದಿತ್ಯ ಎಂಬುದು ಈ ಕುಟುಂಬದ ಗೋತ್ರವಾಗಿತ್ತು. ಶುದ್ಧೋಧನನಿಗೆ ಮಹಾಮಾಯ ಎಂಬಾಕೆಯೊಂದಿಗೆ ವಿವಾಹವಾಯಿತು. ಮಹಾಮಾಯೆಯು ಅಂಜನ ಮತ್ತು ಸುಲಕ್ಷಣಾ ಎಂಬ ದಂಪತಿಯ ಪುತ್ರಿಯಾಗಿದ್ದಳು. ಅಂಜನನು ಕೋಲಿಯ ವಂಶದವನಾಗಿದ್ದು, ದೇವದಾಹ ಎಂಬ ಹಳ್ಳಿಯಲ್ಲಿ ವಾಸವಾಗಿದ್ದನು. ಶುದ್ಧೋಧನನು ಪರಾಕ್ರಮಿಯಾಗಿದ್ದನು. ಜೊತೆಗೆ ಬಹುದೊಡ್ಡ ಸೈನ್ಯದ ಒಡೆಯನಾಗಿದ್ದನು. ತನ್ನ ಶೌರ್ಯ ಸಾಹಸಗಳಿಂದಾಗಿ ಅವನಿಗೆ ಎರಡನೇ ವಿವಾಹವಾಗಲೂ ಅನುಮತಿ ದೊರಕಿತು.

ಹೀಗಾಗಿ ಅವನು ತನ್ನ ಪತ್ನಿ ಮಹಾಮಾಯೆಯ ಹಿರಿಯ ಸಹೋದರಿಯಾದ ಪ್ರಜಾಪತಿ ಎಂಬಾಕೆಯನ್ನು ವಿವಾಹವಾದನು. ಶುದ್ಧೋಧನನು ಅಗರ್ಭ ಶ್ರೀಮಂತನಾಗಿದ್ದನು. ಅವನ ಬಳಿ ಬಹು ವಿಸ್ತಾರವಾದ ಭೂಮಿಯಿತ್ತು. ಜೊತೆಗೆ ಅವನ ಆಶ್ರಯದಲ್ಲಿ ಅಸಂಖ್ಯಾತ ಸೇವಕ ವರ್ಗವೂ ಇತ್ತು. ಶುದ್ಧೋಧನನು ತನ್ನ ಭೂಮಿಯನ್ನು ಉಳಿಮೆ ಮಾಡಲು ಸಾವಿರ ನೇಗಿಲಗಳನ್ನು ಹೂಡುತ್ತಿದ್ದನು ಎಂದು ತಿಳಿದುಬರುತ್ತದೆ. ಶುದ್ಧೋಧನನು ಭೋಗ ಜೀವನವನ್ನು ನಡೆಸುತ್ತಿದ್ದನು. ಅವನು ಇದಕ್ಕಾಗಿ ಅನೇಕ ಅರಮನೆಗಳನ್ನು ಕಟ್ಟಿಸಿಕೊಂಡಿದ್ದನು.

ಶಾಕ್ಯರ ಸಂಪ್ರದಾಯದ ಪ್ರಕಾರ ರಾಜನ ಕುಟುಂಬ ಪರಿವಾರವು ಒಳಗೊಂಡಂತೆ ರಾಜ್ಯದ ಜನರೆಲ್ಲರೂ ಪ್ರತಿವರ್ಷ ಆಷಾಡಮಾಸದ ನಡು ಬೇಸಿಗೆಯಲ್ಲಿ ವಸಂತ ಹಬ್ಬವನ್ನು ಆಚರಿಸುತ್ತಿದ್ದರು. ಈ ಹಬ್ಬವನ್ನು ಶಾಕ್ಯರು ಏಳು ದಿವಸಗಳ ಕಾಲ ಆಚರಿಸುತ್ತಿದ್ದರೆಂದು ತಿಳಿದು ಬರುತ್ತದೆ. ಹಬ್ಬದ ಕೊನೆಯ ದಿನ ಮಹಾಮಾಯೆಯು ತನ್ನ ಪತಿ ಶುದ್ಧೋಧನನೊಂದಿಗೆ ಮಿಲನ ಮಹೋತ್ಸವದಲ್ಲಿ ಪಾಲ್ಗೊಂಡು

ಪರಿಣಾಮ ಗರ್ಭವತಿಯಾದಳು. ಅರಮನೆಯ ಅಂತಃಪುರದ ಸುಖದ ಸುಪ್ಪತ್ತಿಗೆಯ ಮೇಲೆ ಗಾಢನಿದ್ರೆಯಲ್ಲಿ ಮಗಲಗಿರುವಾಗ ಆಕೆಗೆ ಒಂದು ಕನಸು ಬಿತ್ತು. ಮಹಾಮಾಯೆಯ ಕನಸಿನಲ್ಲಿ ನಾಲ್ಕು ಲೋಕಗಳ ರಕ್ಷಕರಾದ ದೇವತೆಗಳು ಬಂದು ಹಾಸಿಗೆಯ ಸಹಿತ ಎತ್ತುಕೊಂಡು ಹೋಗಿ ಹಿಮಾಲಯ ಪರ್ವತದ ಸಮತಟ್ಟಾದ ಪ್ರದೇಶವೊಂದರ ಬಳಿ ಇದ್ದ ಸಾಲವೃಕ್ಷವೊಂದರ ನೆರಳಿನಲ್ಲಿ ಮಲಗಿಸಿದರು. ಆ ವೇಳೆಗೆ ಸರಿಯಾಗಿ ಸುವೇಧನ ಎಂಬ ಬೋಧಿಸತ್ವನು ಆಕೆಯ ಎದುರು ಪ್ರತ್ಯಕ್ಷನಾಗಿ, ನಾನು ನಿನ್ನ ಗರ್ಭದ ಮೂಲಕ ಭೂಮಿಯಲ್ಲಿ ತನ್ನ ಅಂತಿಮ ಜನ್ಮವನ್ನು ತಾಳಲು ನಿರ್ಧರಿಸಿದ್ದೇನೆ. ನೀನು ನನ್ನ ತಾಯಿಯಾಗಲೂ ಸಿದ್ಧಳಾಗಿರುವೆಯಾ? ಎಂದು ಕೇಳಿದನು. ನಾನು ಅತ್ಯಂತ ಸಂತೋಷದಿಂದ ನಿನ್ನ ಕೋರಿಕೆಯನ್ನು ಸ್ವೀಕರಿಸಿದ್ದೇನೆ ಎಂದು ಮಹಾಮಾಯೆಯು ಉತ್ತರಿಸಿದಳು. ತಕ್ಷಣ ಅವಳಿಗೆ ಎಚ್ಚರವಾಯಿತು. ನಡೆದ ಸಂಗತಿಯನ್ನೆಲ್ಲಾ ಪತ್ನಿಯು ಪತಿ ಶುದ್ಧೋಧನನಿಗೆ ತಿಳಿಸಿದಳು. ಇದರ ವಿವರಗಳನ್ನು ತಿಳಿಯಲು ಶುದ್ಧೋಧನನು ಎಂಟು ಜನ ಬ್ರಾಹ್ಮಣರನ್ನ ಅರಮನೆಗೆ ಕರೆಸಿದನು.

ರಾಮ, ಧಗ, ಲಕ್ಕಣ, ವಂತಿ, ಯನ್ನ, ಸುಯಮ, ಸುಭೋದ ಮತ್ತು ಸುದತ್ತ ಎಂಬ ಹೆಸರಿನ ಎಂಟು ಜನ ಬ್ರಾಹ್ಮಣ ಜ್ಯೋತಿಷಿಗಳನ್ನು ಕರೆಯಿಸಿ ಸಕಲ ಮರ್ಯಾದೆಗಳನ್ನು ನೀಡಿ ಸತ್ಕರಿಸಿದನು. ತನ್ನ ಪತ್ನಿಯು ಕಂಡ ಕನಸ್ಸಿನ ಅರ್ಥವನ್ನು ವಿವರಿಸಿ ಹೇಳಬೇಕೆಂದು ಪ್ರಾರ್ಥಿಸಿಕೊಂಡನು. ಬ್ರಾಹ್ಮಣರು ಶುದ್ಧೋಧನನನ್ನು ಉದ್ದೇಶಿಸಿ ರಾಜನೇ ನೀನು ಆತಂಕ ಪಡುವ ಅವಶ್ಯಕತೆ ಇಲ್ಲ. ಸಧ್ಯದಲ್ಲೇ ನಿನಗೊಬ್ಬ ಪುತ್ರ ಜನಿಸುತ್ತಾನೆ. ಅವನು ಗ್ರಹಸ್ಥನಾದರೆ ಈ ಲೋಕವನ್ನು ಚಕ್ರವರ್ತಿಯಾಗಿ ಆಳಬಲ್ಲ. ಒಂದು ವೇಳೆ ಅವನು ಸಂನ್ಯಾಸಿಯಾದರೆ ಈ ಜಗತ್ತಿನಲ್ಲಿರುವ ಸುಖ ಮತ್ತು ದುಃಖಗಳನ್ನು ನೀಗಿಸಬಲ್ಲ. ಬುದ್ಧನಾಗಿ ಪರಿವರ್ತನೆ ಹೊಂದುತ್ತಾನೆ ಎಂದು ಭವಿಷ್ಯವಾಣಿಯನ್ನು ನುಡಿದರು. ಹೆರಿಗೆಯ ಸಮಯ ಸಮೀಪಿಸುತ್ತಿದ್ದಂತೆ ಮಹಾಮಾಯೆ ತನ್ನ ತವರುಮನೆಗೆ ಹೊರಡಲು ಸಿದ್ಧಳಾದಳು. ಪತಿ ಶುದ್ಧೋಧನನು ಸಕಲ ಮರ್ಯಾದೆಗಳೊಂದಿಗೆ ಮತ್ತು ಗೌರವಗಳೊಂದಿಗೆ ಚಿನ್ನದ ಪಲ್ಲಕಿಯಲ್ಲಿ ಪತ್ನಿಯಾದ ಮಹಾಮಾಯೆಯನ್ನು ಕೂಡಿಸಿ ಅರಮನೆಯ ಸಕಲ ಗೌರವ ಮತ್ತು ಪರಿವಾರದೊಂದಿಗೆ ಆಕೆಯ ತಂದೆಯ ಮನೆಯಿರುವ ದೇವದಾಹ ನಗರಕ್ಕೆ ಕಳುಹಿಸಿ ಕೊಟ್ಟನು. ಲುಂಬಿಣಿ ವನದ ಪ್ರಕೃತಿ ಸೌಂದರ್ಯಕ್ಕೆ ಮನಸೋತ ಮಹಾಮಾಯೆಯು ಸ್ವಲ್ಪ ಕಾಲ ಆ ಸ್ಥಳದಲ್ಲಿ ವಿಶ್ರಮಿಸಲು ಬಯಸಿದ್ದಳು. ಪಲ್ಲಕಿಯಿಂದ ಕೆಳಗೆ ಇಳಿದು ಬಂದ ಮಹಾಮಾಯೆಯು ಒಂದು ಬೃಹತ್ ಸಾಲ ವೃಕ್ಷದ ಬಳಿಗೆ ಆಗಮಿಸಿದಳು. ಬೀಸುತ್ತಿದ್ದ ತಂಗಾಳಿಯಿಂದಾಗಿ ಮೇಲಕ್ಕೋ ಕೆಳಕ್ಕೋ ತೂಗಾಡುತ್ತಿದ್ದ ಮರದ ಕೊಂಬೆಗಳನ್ನು ಹಿಡಿದುಕೊಳ್ಳ ಬಯಸಿದಳು. ಮರದ ಕೊಂಬೆಯೊಂದು ಕೈಗೆಟುಕುವಷ್ಟು ಸಮೀಪ ಬಂದಾಗ ತುದಿಗಾಲ ಮೇಲೆ ನಿಂತಿದ್ದ ಮಹಾಮಾಯೆ ಮರದ ಕೊಂಬೆಯನ್ನು ಹಿಡಿದುಕೊಂಡಳು. ಕೂಡಲೇ ಅದು ಮೇಲಕ್ಕೇರಿತು. ಅವಳು ಸಹ ರೆಂಬೆಯೊಂದಿಗೆ ಮೇಲಕ್ಕೇರಿದಳು. ಈ ತೂಗಾಟದಿಂದ ಮಹಾಮಾಯೆಗೆ ಹೆರಿಗೆಯ ನೋವು ಕಾಣಿಸಿಕೊಂಡಿತ್ತು. ಸಾಲ ವೃಕ್ಷದ ಕೊಂಬೆಯನ್ನು ಆಕೆಯು ತನ್ನ

ಕೈಯಲ್ಲಿ ಹಿಡಿದು ನಿಂತಿದ್ದ ಸಮಯದಲ್ಲೇ ಆಕೆಗೆ ಹೆರಿಗೆಯಾಗಿ ಗಂಡು ಮಗುವಿನ ಜನನವಾಯಿತು. ಕ್ರಿ.ಪೂ. 563 ವರ್ಷದ ವೈಶಾಖ ಪೂರ್ಣಿಮೆಯ ದಿನದಂದು ಮಹಾಮಾಯೆಗೆ ಗಂಡು ಮಗುವಿನ ಜನನವಾಯಿತು. ಶುದ್ಧೋಧನ ಮತ್ತು ಮಹಾಮಾಯೆಯರ ವಿವಾಹದ ನಂತರ ಬಹಳ ವರ್ಷಗಳ ಕಾಲ ಅವರಿಗೆ ಸಂತಾನ ಭಾಗ್ಯವಿರಲಿಲ್ಲ. ಪುತ್ರನ ಜನನದಿಂದ ಶುದ್ಧೋಧನ ಮತ್ತು ಮಹಾಮಾಯೆ ಅಷ್ಟೇ ಅಲ್ಲದೆ ರಾಜ ಪರಿವಾರ ಮಾತ್ರವಲ್ಲದೇ ಜೊತೆಗೆ ಶಾಕ್ಯಕುಲದ ಎಲ್ಲರೂ ಸಂಭ್ರಮಿಸಿದರು. ಮಗು ಜನಿಸಿದ ಸಂದರ್ಭದಲ್ಲಿ ಕಪಿಲವಸ್ತುವನ್ನು ಸರದಿಯ ಪ್ರಕಾರ ಶುದ್ಧೋಧನನು ಆಳುತ್ತಿದ್ದರಿಂದ ಅಲ್ಲಿಯ ಪ್ರಜೆಗಳು ಅವನನ್ನು ರಾಜನೆಂದು ಕರೆಯುತ್ತಿದ್ದರು. ಹಾಗಾಗಿ ಸಹಜವಾಗಿ ಅವನ ಪುತ್ರನನ್ನು ರಾಜಕುಮಾರ ಎಂದು ಕರೆದರು. ಮಗು ಜನಿಸಿದ ಐದನೆಯ ದಿನದಂದು ನಾಮಕರಣ ಏರ್ಪಡಿಸಲಾಯಿತು. ಮಗುವಿಗೆ ಸಿದ್ಧಾರ್ಥ ಎಂದು ಹೆಸರಿಡಲಾಯಿತು. ಶುದ್ಧೋಧನನ ಗೋತ್ರದ ಹೆಸರು ಗೌತಮ ಎಂಬುದಾಗಿತ್ತು. ಆದ್ದರಿಂದ ಮಗುವನ್ನು ಸಿದ್ಧಾರ್ಥ ಗೌತಮ ಎಂಬ ಹೆಸರಿನಿಂದ ಕರೆಯಲಾಯಿತು. ತನ್ನ ಬದುಕಿನ ಅಂತ್ಯಕಾಲ ಸಮೀಪಿಸುತ್ತಿದೆ ಎಂಬುದನ್ನು ಅರಿತ ಮಹಾಮಾಯೆಯು ತನ್ನ ಪತಿ ಶುದ್ಧೋಧನ ಮತ್ತು ಸಹೋದರಿ ಪ್ರಜಾಪತಿ ಗೌತಮಿಯನ್ನು ತನ್ನ ಬಳಿಗೆ ಕರೆಸಿಕೊಂಡಳು. ನಂತರ ಅವರಿಗೆ ತನ್ನ ಪುತ್ರನ ವಿಚಾರದಲ್ಲಿ ಅಸಿತ ಮಹಾಮುನಿಗಳು ನುಡಿದಿರುವ ಭವಿಷ್ಯ ನಿಜವಾಗುತ್ತದೆ. ಆದರೆ ಅದು ಈಡೇರುವುದನ್ನು ನನ್ನಿಂದ ನೋಡಲು ಆಗುವುದಿಲ್ಲ ಎಂಬ ನೋವು ನನ್ನದಾಗಿದೆ ಎಂದು ಹೇಳುತ್ತಾ ಮಗುವಿನ ಸಂಪೂರ್ಣ ಜವಾಬ್ದಾರಿಯನ್ನು ಪ್ರಜಾಪತಿಗೆ ಒಪ್ಪಿಸಿ ಅಸುನೀಗಿದಳು. ಸಿದ್ಧಾರ್ಥನು ತಾನು ಜನಿಸಿದ ಕೇವಲ ಏಳು ದಿನದೊಳಗೆ ಅಂದರೆ ಒಂದು ವಾರದ ಮಗುವಾಗಿದ್ದಾಗ ತನ್ನ ತಾಯಿ ಮಹಾಮಾಯೆಯನ್ನು ಕಳೆದುಕೊಂಡನು.

ಶಾಕ್ಯವಂಶದ ಹಿರಿಯರು ಶುದ್ಧೋಧನನಿಗೆ ಸಿದ್ಧಾರ್ಥನನ್ನು ಗ್ರಾಮದೇವತೆಯಾದ ಅಭಯಮಾತೆಯ ದೇವಸ್ಥಾನಕ್ಕೆ ಕರೆದುಕೊಂಡು ಹೋಗುವಂತೆ ಸಲಹೆ ನೀಡಿದರು. ಅದರಂತೆ ಪ್ರಜಾಪತಿ ಸಿದ್ಧಾರ್ಥ ಗೌತಮನಿಗೆ ಪೋಷಾಕು ಹಾಕಿ ಸಿದ್ಧತೆ ಮಾಡಿದಳು. ಬಾಲಕ ಸಿದ್ಧಾರ್ಥ ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದಿರಿ ಎಂದು ಪ್ರಶ್ನಿಸಿದರು. ದೇವಾಲಯಕ್ಕೆ ಕರೆದುಕೊಂಡು ಹೋಗುವ ವಿಷಯವನ್ನು ಕೇಳಿ ನಕ್ಕನು.

ಸಿದ್ಧಾರ್ಥನು ಮೂಲತಃ ಮೃದು ಸ್ವಭಾವದವನಾಗಿದ್ದನು. ಅವನು ಎಂದಿಗೂ ಒಬ್ಬ ಮನುಷ್ಯನು ಇನ್ನೊಬ್ಬ ಮನುಷ್ಯನನ್ನು ಶೋಷಿಸುವುದನ್ನು ಸಹಿಸುತ್ತಿರಲಿಲ್ಲ. ಒಮ್ಮೆ ಸಿದ್ಧಾರ್ಥ ತಂದೆಯೊಂದಿಗೆ ಜಮೀನಿಗೆ ಹೋದ ಸಂದರ್ಭದಲ್ಲಿ ಅಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ನೋಡಿ ಅವನ ಮನಸ್ಸು ತುಂಬಾ ಘಾಸಿಗೊಂಡಿತ್ತು. ಅವರನ್ನೆಲ್ಲ ಉದ್ದೇಶಿಸಿ ಸಿದ್ಧಾರ್ಥನು ಒಬ್ಬ ಮನುಷ್ಯ ಇನ್ನೊಬ್ಬನನ್ನು ಶೋಷಿಸುವುದು ತಪ್ಪಲ್ಲವೇ? ಕಾರ್ಮಿಕರು ದುಡಿಯಬೇಕು ಯಜಮಾನರು ಮಾತ್ರ ಅವರ ಶ್ರಮದ ಫಲವನ್ನು ಅನುಭವಿಸಬೇಕು ಎಂಬುದು ಎಂತಹ ನ್ಯಾಯ? ಎಂದು ಪ್ರಶ್ನಿಸಿದನು. ಸಿದ್ಧಾರ್ಥನು ಸ್ವತಃ

ನೇಗಿಲ ಹಿಡಿದು ಉಳುಮೆ ಮಾಡುತ್ತಿದ್ದನು. ಸಿದ್ಧಾರ್ಥನು ವಿದ್ಯಾವಂತನಾಗಿದ್ದರೂ ಎಂದೂ ಶಾರೀರಿಕ ಶ್ರಮವನ್ನು ಕಡೆಗಣಿಸುತ್ತಿರಲಿಲ್ಲ. ಪ್ರಾಣಿಗಳನ್ನು ಕೊಲ್ಲುವುದನ್ನು ವಿರೋಧಿಸುತ್ತಿದ್ದನು. ಸಿದ್ಧಾರ್ಥನ ಮನೋಧರ್ಮವನ್ನು ಕಂಡು ಪ್ರಜಾಪತಿಯು ನೊಂದುಕೊಳ್ಳುತ್ತಿದ್ದಳು. ಪ್ರಜಾಪತಿಯು ಸಿದ್ಧಾರ್ಥನೊಂದಿಗೆ ಚರ್ಚೆ ಮಾಡುತ್ತಿದ್ದಳು. ನೀನು ಕ್ಷತ್ರಿಯನೆಂದು ಯುದ್ಧ ಮಾಡುವುದು ನಿನ್ನ ಕರ್ತವ್ಯವೆಂದು ಪ್ರಾಣಿಗಳನ್ನು ಬೇಟೆಯಾಡುವುದು ಸರಿಯಾದ ಕರ್ಮವೆಂದು ಯುದ್ಧ ಮಾಡುವುದು ಕ್ಷತ್ರಿಯರ ಧರ್ಮವೆಂದು ಹೇಳುತ್ತಿದ್ದಳು. ಅಮ್ಮ ಕ್ಷತ್ರಿಯರು ಯಾವ ಉದ್ದೇಶಕ್ಕಾಗಿ ಯುದ್ಧ ಮಾಡಬೇಕು? ಎಂದು ಪ್ರಶ್ನಿಸಿದನು. ಅದಕ್ಕೆ ಪ್ರಜಾಪತಿಯು ಏಕೆಂದರೆ ಅದು ಅವರ ಕರ್ತವ್ಯ ಎಂದು ಉತ್ತರಿಸಿದಳು. ತನ್ನ ತಾಯಿಯ ಉತ್ತರದಿಂದ ಸಿದ್ಧಾರ್ಥನಿಗೆ ತೃಪ್ತಿಯಾಗಲಿಲ್ಲ. ಒಬ್ಬ ಮನುಷ್ಯನನ್ನು ಮತ್ತೊಬ್ಬ ಮನುಷ್ಯ ಕೊಲ್ಲುವುದು ಹೇಗೆ ಕರ್ತವ್ಯವಾಗುತ್ತದೆ? ಎಂಬುದು ನನಗೆ ಸರಿಯಾಗಿ ತಿಳಿಯುವಂತೆ ಹೇಳು ಎಂದು ಒತ್ತಾಯಿಸುತ್ತಿದ್ದನು. ಇದಕ್ಕೆ ಪ್ರಜಾಪತಿಯು ರಾಜನಾಗಿದ್ದವನು ತನ್ನ ರಾಜ್ಯವನ್ನು ಕಾಪಾಡಿಕೊಳ್ಳಲು ಯುದ್ಧ ಅನಿವಾರ್ಯ ಎಂದು ಹೇಳುತ್ತಿದ್ದಳು. ಇದಕ್ಕೆ ಸಿದ್ಧಾರ್ಥನು ಅಮ್ಮಾ ಎಲ್ಲಾ ಕ್ಷತ್ರಿಯರೂ ಪರಸ್ಪರ ಪ್ರೀತಿಸುವುದಾದರೆ ಯಾವ ಹಿಂಸೆ ಇಲ್ಲದೆ ತಮ್ಮ ತಮ್ಮ ರಾಷ್ಟ್ರವನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೇ? ಎಂದು ಪ್ರಶ್ನಿಸುತ್ತಿದ್ದನು.

ಶಾಕ್ಯರು ತಮ್ಮ ಕುಲಕ್ಕೆ ತಮ್ಮದೇ ಆದ ಒಂದು ಪ್ರತ್ಯೇಕ ಸಂಘವೊಂದನ್ನು ಸ್ಥಾಪಿಸಿಕೊಂಡಿದ್ದರು. ಈ ಸಂಘಕ್ಕೆ 20 ವರ್ಷ ದಾಟಿದ ಶಾಕ್ಯ ಕುಲದ ಪ್ರತಿಯೊಬ್ಬ ಯುವಕನೂ ದೀಕ್ಷೆ ಪಡೆಯುವುದರ ಮೂಲಕ ಸದಸ್ಯನಾಗಬೇಕಾಗಿತ್ತು. ಹಾಗೆಯೇ ಸಿದ್ಧಾರ್ಥನು ಕೂಡಾ ಸಂಘದ ಸದಸ್ಯನಾಗಿದ್ದನು. ಸಂಘದ ಸದಸ್ಯನಾಗಿ ನಿನ್ನ ಕರ್ತವ್ಯಗಳೆಂಬುದನ್ನು ಮೊದಲು ನಿನಗೆ ತಿಳಿಸುವೆ ಎಂದು ನುಡಿದ ಪುರೋಹಿತರು ನಿಯಮಗಳನ್ನು ಒಂದೊಂದಾಗಿ ವಿವರಿಸತೊಡಗಿದರು. ಶಾಕ್ಯರ ಹಿತರಕ್ಷಣೆಗಾಗಿ ನಿನ್ನ ತನು ಮನ ಧನಗಳನ್ನು ಧಾರೆಯೆರೆಯಬೇಕು. ಸಂಘದ ಸಭೆಗಳಿಗೆ ಗೈರು ಹಾಜರಾಗಬಾರದು. ಸಂಘದ ಕಾರ್ಯವಿಧಾನದಲ್ಲಿ ಲೋಪದೋಷಗಳು ಕಂಡು ಬಂದರೆ ಕೋಪಗೊಳ್ಳದೆ ಅವುಗಳನ್ನು ನಿಷ್ಪಕ್ಷಪಾತವಾಗಿ ಸಂಘದ ಗಮನಕ್ಕೆ ತರಬೇಕು. ನಿನ್ನ ಮೇಲೆ ಆರೋಪ ಹೊರಿಸಿದ ಪಕ್ಷದಲ್ಲಿ ನೀನು ಕೋಪಗೊಳ್ಳಬಾರದು. ನೀನು ತಪ್ಪು ಮಾಡಿದ್ದರೆ ಒಪ್ಪಿಕೊಳ್ಳಬೇಕು. ನೀನು ತಪ್ಪು ಮಾಡದಿದ್ದರೆ ನಿರ್ದೋಷಿಯೆಂದು ಸಾಬೀತುಪಡಿಸಬೇಕು ಎಂದರು. ಅಲ್ಲದೇ ಸಂಘದಿಂದ ಅನರ್ಹಗೊಳಿಸುವ ನಿಯಮಗಳನ್ನು ವಿವರಿಸಿದರು. ನೀನು ಅತ್ಯಾಚಾರವೆಸಗಿದರೆ ಕೊಲೆಯನ್ನು ಮಾಡಿದರೆ, ಕಳ್ಳತನ ಮಾಡಿದರೆ, ಸುಳ್ಳು ಹೇಳಿದರೆ, ಸಂಘದ ಸದಸ್ಯತ್ವವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದರು.

ಸಿದ್ಧಾರ್ಥನು ಶಾಕ್ಯರ ಸಂಘದಲ್ಲಿ ಎಂಟು ವರ್ಷಗಳ ಕಾಲ ನಿಷ್ಠಾವಂತ ಸದಸ್ಯನಾಗಿ ಕೆಲಸ ಮಾಡಿದನು. ಜೊತೆಗೆ ಪ್ರಾಮಾಣಿಕವಂತನೂ ಆಗಿದ್ದನು. ಈತನ ನಡವಳಿಕೆ ಇತರ ಸದಸ್ಯರಿಗೆ ಮಾದರಿಯಾಗಿದ್ದವು. ಜೊತೆಗೆ ಎಲ್ಲರ ಗೌರವ ಮತ್ತು ಪ್ರೀತಿಗೆ ಪಾತ್ರನಾಗಿದ್ದನು.

ಸಿದ್ಧಾರ್ಥನು ಸದಸ್ಯತ್ವ ಪಡೆದುಕೊಂಡಿದ್ದ ಎಂಟನೆಯ ವರ್ಷದಲ್ಲಿ ಅನಿರೀಕ್ಷಿತವಾಗಿ ನಡೆದ ಘಟನೆಯೊಂದು ಶುದ್ಧೋಧನನ ಕುಟುಂಬದ ಪಾಲಿಗೆ ದುರಂತವಾಗಿ ಪರಿಣಮಿಸಿತು. ಜೊತೆಗೆ ಈ ಘಟನೆಯು ಸಿದ್ಧಾರ್ಥನ ವೈಯಕ್ತಿಕ ಬದುಕಿನಲ್ಲಿ ಹಲವಾರು ಸಂಕಷ್ಟಗಳೂ ಮತ್ತು ಇಕ್ಕಟ್ಟಿನಿಂದ ಕೂಡಿದ ಬಿಕ್ಕಟ್ಟಿಗೆ ಕಾರಣವಾಯಿತು.

ಶಾಕ್ಯರ ರಾಜ್ಯದ ಪಕ್ಕದಲ್ಲಿ ಕೋಲಿಯರ ಸಾಮ್ರಾಜ್ಯವು ಇತ್ತು. ನಡುವೆ ಹರಿಯುತ್ತಿದ್ದ ರೋಹಿಣಿ ನದಿಯು ಈ ಎರಡು ರಾಜ್ಯಗಳನ್ನು ಬೇರ್ಪಡಿಸಿತ್ತು. ರೋಹಣಿ ನದಿಯ ನೀರನ್ನು ಶಾಕ್ಯರು ಮತ್ತು ಕೋಲಿಯರು ಸಮಾನವಾಗಿ ಹಂಚಿಕೊಂಡು ಬೇಸಾಯ ಮಾಡುತ್ತಿದ್ದರು. ಪ್ರತಿವರ್ಷ ಬೇಸಿಗೆ ಕಾಲದಲ್ಲಿ ನದಿಯ ನೀರನ್ನು ಯಾರು ಮೊದಲು ಉಪಯೋಗಿಸಬೇಕು? ಮತ್ತು ಎಷ್ಟು ನೀರನ್ನು ಬಳಸಿಕೊಳ್ಳಬೇಕು? ಎಂಬ ವಿಷಯವಾಗಿ ಎರಡೂ ರಾಜ್ಯಗಳ ನಡುವೆ ವಾದ-ವಿವಾದಗಳು ಉಂಟಾಗುತ್ತಿದ್ದವು. ಆಗಾಗ ಎರಡೂ ರಾಜ್ಯಗಳ ಜನರ ನಡುವೆ ಸಂಘರ್ಷವೂ ಉಂಟಾಗುತ್ತಿತ್ತು. ಅದೂ ಕೆಲವೊಮ್ಮೆ ವಿಕೋಪಕ್ಕೆ ಹೋಗುತ್ತಿತ್ತು.

ಸಿದ್ಧಾರ್ಥನಿಗೆ ಇಪ್ಪತ್ತೆಂಟು ವರ್ಷಗಳು ತುಂಬಿದಾಗ ನದಿ ನೀರಿನ ಸಂಬಂಧ ಶಾಕ್ಯರ ಸೇವಕರು ಮತ್ತು ಕೋಲಿಯರ ಸೇವಕರ ಮಧ್ಯೆ ದೊಡ್ಡ ಘರ್ಷಣೆಯಾಯಿತು. ಇದರಿಂದಾಗಿ ಉಭಯ ಬಣಗಳಲ್ಲಿ ಹಲವಾರು ಜನ ಗಾಯಗೊಂಡರು. ನದಿ ನೀರಿನ ಹಂಚಿಕೆಯ ಸಮಸ್ಯೆಯ ಪರಿಹಾರಕ್ಕೆ ಯುದ್ಧವೊಂದೇ ಅಂತಿಮ ಪರಿಹಾರವೆಂದು ಶಾಕ್ಯರು ಮತ್ತು ಕೊಲಿಯರು ಇಬ್ಬರೂ ನಿರ್ಧರಿಸಿದ್ದರು.

ಶಾಕ್ಯರ ಸೇನಾಧಿಪತಿಯು ಸಂಘದ ಸರ್ವ ಸದಸ್ಯರ ಸಭೆ ಕರೆದು ಕೊಲಿಯರ ಮೇಲೆ ಯುದ್ಧವನ್ನು ಮಾಡುವ ಪ್ರಸ್ತಾಪವನ್ನು ಮುಂದಿಟ್ಟನು. ಕೊಲಿಯರು ನಮ್ಮ ಮೇಲೆ ದಾಳಿ ಮಾಡಿದ್ದರೂ ಕೂಡ ನಾವು ಸುಮ್ಮನಿದ್ದರು ಕೂಡಾ ಅವರು ಪದೇ ಪದೇ ದಾಳಿಮಾಡಿ ನಮ್ಮವರನ್ನು ಗಾಯಗೊಳಿಸಿದ್ದಾರೆ. ಈಗ ನಮಗೆ ಒಂದೇ ಒಂದು ಮಾರ್ಗ. ಅದೇನೆಂದರೆ ಯುದ್ಧಯೊಂದೇ ಕೊನೆಯ ಮಾರ್ಗವಾಗಿದೆ ಮತ್ತು ಅದು ಅನಿವಾರ್ಯವೂ ಆಗಿದೆ.

ಸಂಘವು ಕೊಲಿಯರ ಮೇಲೆ ಯುದ್ಧ ಘೋಷಿಷಬೇಕು ಮತ್ತು ಯಾರೂ ಅದನ್ನು ವಿರೋಧಿಸಬಾರದು. ವಿರೋಧಿಸುವವರು ಇದ್ದರೆ ಈಗ ಮಾತನಾಡಬಹುದು ಎಂದು ಸೇನಾಧಿಪತಿ ಸೂಚಿಸುತ್ತಾನೆ. ಸಿದ್ಧಾರ್ಥ ಗೌತಮನು ತನ್ನ ಆಸನದಿಂದ ಎದ್ದು ನಿಂತು ಮಾತನಾಡಲು ಆರಂಭಿಸಿದ್ದನು. ನಾನು ಈ ಪ್ರಸ್ತಾಪವನ್ನು ವಿರೋಧಿಸುತ್ತೇನೆ. ಯುದ್ಧವು ಯಾವ ಸಮಸ್ಯೆಯನ್ನು ಪರಿಹರಿಸುವುದಿಲ್ಲ. ಯುದ್ಧ ಮಾಡುವುದರಿಂದ ನಮ್ಮ ಉದ್ದೇಶವು ಈಡೇರುವುದಿಲ್ಲ. ಜೊತೆಗೆ ಅದು ಮತ್ತೊಂದು ಯುದ್ದಕ್ಕೆ

ಬೀಜವನ್ನು ಬಿತ್ತುತ್ತದೆ. ಹತ್ಯೆಗೈದರವನ್ನು ಸಂಹಾರ ಮಾಡಲು ಮತ್ತೊಬ್ಬ ಹುಟ್ಟಿಯೇ ಹುಟ್ಟಿಕೊಳ್ಳುತ್ತಾನೆ. ಆಕ್ರಮಣಕಾರರನ್ನು ಆಕ್ರಮಿಸಲು ಮತ್ತೊಬ್ಬನು ಹುಟ್ಟಿ ಬರುವುದು ಖಚಿತ. ಸಂಘವು ಕೊಲಿಯರ ಮೇಲೆ ಯುದ್ಧ ಮಾಡಲು ಅವಸರ ಮಾಡಬಾರದೆಂಬುವುದು ನನ್ನ ಭಾವನೆಯಾಗಿದೆ ಎನ್ನುತ್ತಾರೆ ಸಿದ್ಧಾರ್ಥ ಅವರು. ಕೂಲಂಕಷವಾದ ತನಿಖೆಯಿಂದ ಇದರಲ್ಲಿ ತಪ್ಪು ಯಾರದು ಎಂಬುದನ್ನು ಪರಿಶೀಲಿಸಿ ಮತ್ತು ಆಲೋಚಿಸಿ ನಿರ್ಣಯ ತೆಗೆದುಕೊಳ್ಳಬೇಕು. ನಮ್ಮವರು ಆಕ್ರಮಣಶೀಲ ಪ್ರವೃತ್ತಿಯವರೆಂದು ಕೇಳಿ ತಿಳಿದುಕೊಂಡಿದ್ದೇನೆ. ಈ ಮಾತು ನಿಜವಾಗಿದ್ದಲ್ಲಿ ನಾವು ಆರೋಪಗಳಿಂದ ಮುಕ್ತರಾಗುವುದಿಲ್ಲ ಎಂದು ಸಿದ್ಧಾರ್ಥನು ತನ್ನ ಮನಸ್ಸಿನ ಇಂಗಿತವನ್ನು ಸಭೆಯ ಮುಂದೆ ವ್ಯಕ್ತಪಡಿಸುತ್ತಾನೆ. ಸೇನಾಧಿಪತಿಯು ಇದಕ್ಕೆ ಉತ್ತರಿಸುತ್ತಾ ಹೌದು ನಮ್ಮ ಜನರು ಆಕ್ರಮಣಶೀಲರು. ಆದರೆ ರೋಹಿಣಿ ನದಿಯ ನೀರನ್ನು ಮೊದಲು ಬಳಸಬೇಕಾದುದು ನಾವು ಎಂಬುದು ನಾವೆಲ್ಲರೂ ಮರೆಯುವಂತಿಲ್ಲ ಎನ್ನುತ್ತಾನೆ. ಇದಕ್ಕೆ ಪ್ರತಿಯಾಗಿ ಸಿದ್ಧಾರ್ಥ ಗೌತಮನು ಇದರಿಂದ ನಾವು ಸಂಪೂರ್ಣವಾಗಿ ನಿರ್ದೋಷಿಗಳಲ್ಲ ಎಂಬುದು ತಿಳಿಯುತ್ತದೆ. ಅದಕ್ಕಾಗಿ ನನ್ನ ಸಲಹೆ ಏನೆಂದರೆ ನಾವು ನಮ್ಮ ಪರವಾಗಿ ಇಬ್ಬರು ಪ್ರತಿನಿಧಿಗಳನ್ನು ಆಯ್ಕೆ ಮಾಡೋಣ ಎನ್ನುತ್ತಾನೆ. ಕೋಲಿಯರೂ ತಮ್ಮ ಪರವಾಗಿ ಇಬ್ಬರು ಪ್ರತಿನಿಧಿಗಳನ್ನು ಆಯ್ಕೆ ಮಾಡಲಿ. ಈ ನಾಲ್ವರು ಸೇರಿ ಐದನೆಯ ವ್ಯಕ್ತಿಯನ್ನು ಆಯ್ಕೆಮಾಡಿಕೊಳ್ಳಲಿ.

ಅನಂತರ ಐದು ಜನ ಅವರು ಒಂದಾಗಿ ಮತ್ತು ಒಟ್ಟಾಗಿ ಕುಳಿತುಕೊಂಡು ಸಮಸ್ಯೆ ಮತ್ತು ಸವಾಲಿಗೆ ಪರಿಹಾರವನ್ನು ಸೂಚಿಸಲಿ ಎನ್ನುತ್ತಾನೆ. ಇದಕ್ಕೆ ಸಂಘ ಅನುಮೋದನೆ ನೀಡಿತು. ಆದರೆ ಸೇನಾಧಿಪತಿಯು ಸಿದ್ಧಾರ್ಥನ ಮಾತುಗಳನ್ನು ವಿರೋಧಿಸುತ್ತಾ ಕೊಲಿಯರನ್ನು ಸರಿಯಾದ ರೀತಿಯಲ್ಲಿ ಶಿಕ್ಷಿಸದ ಹೊರತೂ ಅವರ ಕಿರುಕುಳ ನಿಲ್ಲುವುದಿಲ್ಲ ಎಂದು ನುಡಿದನು. ಸಿದ್ಧಾರ್ಥನ ಸಲಹೆಯನ್ನು ಮತಕ್ಕೆ ಹಾಕಲಾಯಿತು. ಆದರೆ ಅದು ತಿರಸ್ಕೃತವಾಯಿತು.

ಸೇನಾಧಿಪತಿಯ ಸಲಹೆಯನ್ನೂ ಮತಕ್ಕೆ ಹಾಕಲಾಯಿತು. ಆಗ ಸಿದ್ಧಾರ್ಥನು ಎದ್ದು ನಿಂತು ಈ ಮೂಲ ನಿರ್ಣಯವನ್ನು ಒಪ್ಪಬಾರದು ಎಂದು ನಾನು ಸಂಘದ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಶಾಕ್ಯರು ಮತು ಕೊಲಿಯರು ಪರಸ್ಪರ ಇವರಿಬ್ಬರೂ ಹತ್ತಿರದ ಬಂಧುಗಳು. ಅವರು ಪರಸ್ಪರ ಒಬ್ಬರನ್ನೊಬ್ಬರು ನಾಶಪಡಿಸುವುದು, ಕೊಲೆಗೈಯುವುದು ಅವಿವೇಕದ ಕ್ರಮವೆಂದು ಸಿದ್ಧಾರ್ಥನು ಹೇಳಿದನು. ಆದರೆ ಸಿದ್ಧಾರ್ಥನ ಈ ಮನವಿಯನ್ನು ಸೇನಾಧಿಪತಿಯು ಮತ್ತೆ ವಿರೋಧಿಸಿದನು. ಕ್ಷತ್ರಿಯರಾದವರು ಯುದ್ಧದಲ್ಲಿ ಬಂಧುಗಳು ಮತ್ತು ಪರಕೀಯರೆಂದು ಭೇದಮಾಡಬಾರದು. ತಮ್ಮ ರಾಜ್ಯದ ಹಿತಕ್ಕಾಗಿ ತಮ್ಮ ಸಹೋದರರೊಂದಿಗೆ ಹೋರಾಡಬೇಕೆಂದು ಕರೆ ನೀಡಿದನು. ಬ್ರಾಹ್ಮಣರು ಯಜ್ಞ ಯಾಗಾದಿಗಳನ್ನು ಮಾಡುವುದು ಅವರ ಕರ್ತವ್ಯವಾಗಿದೆ. ಅದರಂತೆಯೇ ಎದುರಾಳಿಗಳನ್ನು ಯುದ್ಧದಲ್ಲಿ ಹೋರಾಡುವುದು ಹೆದರಿಸುವುದು ಕ್ಷತ್ರಿಯರ ಕರ್ತವ್ಯವಾಗಿದೆ. ವ್ಯಾಪಾರ ಮಾಡುವುದು ವೈಶ್ಯರ ಕರ್ತವ್ಯವಾಗಿದೆ. ಮತ್ತು ಇವರೆಲ್ಲರ ಸೇವೆಯನ್ನು ಮಾಡುವುದು ಶೂದ್ರರ ಕರ್ತವ್ಯವಾಗಿದೆ.

ಹೀಗೆ ಪ್ರತಿಯೊಂದು ವರ್ಗವು ತನ್ನದೇಯಾದ ಸ್ಥಾನಮಾನಗಳಗನುಗುಣವಾಗಿ ತಮ್ಮ ತಮ್ಮ ಕರ್ತವ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಇದು ಧರ್ಮಶಾಸ್ತ್ರಗಳು ವಿಧಿಸಿರುವ ನಿಯಮ ಎಂದು ಹೇಳಿದನು.

ಸಿದ್ಧಾರ್ಥನು ಇದಕ್ಕೆ ಉತ್ತರಿಸುತ್ತಾ ನಾನು ಗ್ರಹಿಸಿರುವಂತೆ ಧರ್ಮವೂ ದ್ವೇಷವನ್ನು ದ್ವೇಷದಿಂದ ಪರಿಹರಿಸಬಹುದೆಂದು ಹೇಳುವುದಿಲ್ಲ. ಆದರೆ, ಪ್ರೀತಿಯಿಂದ ಮಾತ್ರ ವೈರತ್ವವನ್ನು ಗೆಲ್ಲಬಹುದು ಎನ್ನುತ್ತಾರೆ ಸಿದ್ಧಾರ್ಥ ಅವರು. ಪ್ರೀತಿಯಿಂದ ಮಾತ್ರ ವೈರತ್ವವನ್ನು ಗೆಲ್ಲಬಹುದು ಎಂಬ ಈ ಮಾತಿನಿಂದ ಕುಪಿತಗೊಂಡ ಸೇನಾಧಿಪತಿಯು ತನ್ನ ನಿಲುವಳಿಕೆಯನ್ನು ಮತಕ್ಕೆ ಹಾಕೋಣ ಎಂದನು. ಆಗ ಶಾಕ್ಯರ ಸಭೆಯಲ್ಲಿ ಸೇನಾಪತಿಯ ನಿಲುವು ಬಹುಮತದಿಂದ ಅಂಗೀಕರಿಸಲಾಯಿತು. ಸಿದ್ಧಾರ್ಥನ ಈ ವಾದಕ್ಕೆ ಸೋಲುಂಟಾಯಿತು.

ಸೇನಾಧಿಪತಿಯು ತಾನು ರೂಪಿಸಿದ ಯುದ್ಧ ಮಾಡುವ ಯೋಚನೆಯನ್ನು ಕುರಿತು ಶಾಕ್ಯ ಸಂಘದ ಸಭೆ ಕರೆದು ಎಲ್ಲಾ ಯುವಕರು ಯುದ್ಧಕ್ಕೆ ಸನ್ನದರಾಗಬೇಕೆಂದು ಕರೆ ನೀಡಿದರು. ಸಭೆಯಲ್ಲಿ ಕೋಲಿಯರ ವಿರುದ್ಧ ಯುದ್ಧ ಮಾಡಬೇಕೆಂಬ ನಿಲುವಳಿಯ ಪರವಾಗಿದ್ದವರು. ಜೊತೆಗೆ ಅದರ ವಿರುದ್ಧವಾಗಿದ್ದ ಎಲ್ಲಾ ಸದಸ್ಯರು ಸಭೆಯಲ್ಲಿ ಹಾಜರಿದ್ದರು. ಸೇನಾಪತಿಯ ನಿಲುವಳಿಯನ್ನು ವಿರೋಧಿಸಿ ಸಿದ್ಧಾರ್ಥನ ತಿದ್ದುಪಡೆಗೆ ಬೆಂಬಲ ಸೂಚಿಸಿದ್ದ ಎಲ್ಲ ಮತದ ಸದಸ್ಯರಿಗೆ ಈ ಹೊಸ ನಿರ್ಣಯವನ್ನು ಒಪ್ಪಬೇಕೆ? ಬೇಡವೆ ಎಂಬ ಸಂಧಿಗ್ಧತೆಯೂ ತಲೆದೋರಿತು. ಆದರೆ, ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ನೇರವಾಗಿ ಹೇಳುವ ಧೈರ್ಯ ಯಾರಿಗೂ ಇರಲಿಲ್ಲ ಎಂದು ಕಂಡು ಬರುತ್ತದೆ. ಸಿದ್ಧಾರ್ಥನು ತನ್ನ ಬೆಂಬಲಿಗರು ಮೌನವಾಗಿ ಕುಳಿತಿದ್ದನ್ನು ನೋಡಿ ತಾನೇ ಎದ್ದು ನಿಂತು ಸಂಘವನ್ನು ಉದ್ದೇಶಿಸಿ ಹೀಗೆ ಮಾತನಾಡುತ್ತಾರೆ. ಸ್ನೇಹಿತರೇ ನಿಮಗೆ ಇಷ್ಟವಾದುದನ್ನು ನೀವು ಮಾಡಬಹುದು. ಯುದ್ಧ ಕುರಿತ ನಿರ್ಣಯದ ಬಗ್ಗೆ ಬಹುಮತ ನಿಮ್ಮ ಪರವಾಗಿರುವುದು ಸಹಜ. ಆದರೆ ಯುದ್ಧಕ್ಕೆ ಸಿದ್ಧನಾಗಬೇಕೆಂಬ ನಿಮ್ಮ ಸೂಚನೆಯನ್ನು ನಾನು ವಿರೋಧಿಸುತ್ತಿರುವುದಕ್ಕೆ ನಿಮ್ಮ ಕ್ಷಮೆಯಿರಲಿ. ನಾನು ನಿಮ್ಮ ಸೈನ್ಯವನ್ನು ಸೇರುವುದಿಲ್ಲ ಮತ್ತು ಯುದ್ಧದಲ್ಲಿ ಭಾಗಿಯಾಗಿರುವುದಿಲ್ಲ ಎಂದು ನೇರವಾಗಿ ಹೇಳಿದನು. ಗೌತಮ ಬುದ್ಧನ ಜೀವನದಲ್ಲಿ ಈ ಯುದ್ಧ ಬಹುದೊಡ್ಡ ಕ್ರಾಂತಿಯಾಗಿ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ.

ಶಾಂತಿಗಾಗಿ, ಪ್ರೀತಿಗಾಗಿ, ಮಾನವೀಯತೆಗಾಗಿ, ಸೌಹಾರ್ದತೆಗಾಗಿ ಇದೊಂದು ಮಹತ್ವದ ಚಳುವಳಿಯಾಗಿ ದಾಖಲಾಗಿದೆ. ಸಿದ್ಧಾರ್ಥ ಸಂಘದ ನಿಯಮಗಳನ್ನೇ ಮುರಿದು ಸಂಘದ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಸಿದ್ಧಾರ್ಥನಿಗೆ ಸೇನಾಧಿಪತಿಯು ಸಂಘದ ಸದಸ್ಯನಾಗಿ ಸೇರಿದಾಗ ಮಾಡಿಸುವ ಪ್ರತಿಜ್ಞೆಗಳನ್ನು ಜ್ಞಾಪಿಸಿಕೋ ಎಂದು ಎಚ್ಚರಿಸುತ್ತಾನೆ. ಅದರಿಂದಾಗುವ ಪರಿಣಾಮದ ಬಗ್ಗೆಯೂ ಎಚ್ಚರಿಸುತ್ತಾನೆ. ಅದಕ್ಕೆ ಸಿದ್ಧಾರ್ಥ ತುಂಬಾ ಮಾರ್ಮಿಕವಾದ ಉತ್ತರ ಕೊಡುತ್ತಾನೆ. ಹೌದು

ಸಂಘಕ್ಕಾಗಿ ನಾನು ನನ್ನ ತನು ಮನ ಧನಗಳ ಮೂಲಕ ಶಾಕ್ಯರ ಹಿತರಕ್ಷಣೆ ಮಾಡುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದೆ. ಆದರೆ, ಯುದ್ಧದಿಂದ ಶಾಕ್ಯರ ಹಿತರಕ್ಷಣೆಯಾಗುವದೆಂದು ನನಗೆ ಅನಿಸುತ್ತಿಲ್ಲ.

ಶಾಕ್ಯರ ಹಿತರಕ್ಷಣೆಯ ಮುಂದೆ ನನಗಾಗುವ ಅವಮಾನ ಎಂದರೆ ಏನು? ಎಂದು ಕೇಳಿದನು. ಈಗಿನ ಯುದ್ಧವು ಶಾಕ್ಯರ ಸ್ವಾತಂತ್ರ್ಯವನ್ನು ಮತ್ತಷ್ಟು ಮೊಟಕುಗೊಳಿಸಿ ಕೋಸಲ ರಾಜನಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ಒದಗಿಸುತ್ತದೆ ಎಂದು ಸೇನಾಧಿಪತಿಗೆ ತಿಳಿಸಿ ಹೇಳಿದನು. ಅದಕ್ಕೆ ಸೇನಾಧಿಪತಿಯು ಸಿದ್ಧಾರ್ಥನಿಗೆ ಕೋಸಲ ರಾಜನಪರವಾಗಿ ಮಾತನಾಡುತ್ತಿರುವೆ. ಸಂಘವು ನಿನಗೆ ಮರಣ ದಂಡನೆ ವಿಧಿಸಿದರೆ ಕೋಸಲದ ರಾಜ ನಿನ್ನನ್ನು ರಕ್ಷಿಸಲಾರ ಎಂದು ನುಡಿದನು. ಅಲ್ಲದೆ ಸಂಘವು ನಿನ್ನನ್ನು ಬೇರೆ ರೀತಿಯಿಂದಲೂ ಶಿಕ್ಷಿಸಬಹುದು ಎಂದನು. ಸಂಘವು ನಿನ್ನ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಬಹುದು. ಅಥವಾ ನಿಮ್ಮ ಕುಟುಂಬದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು. ನಿನ್ನನ್ನು ಗಡಿಪಾರು ಮಾಡಬಹುದು ಎಂದು ಸೇನಾಧಿಪತಿಯು ಸಿದ್ಧಾರ್ಥನಿಗೆ ತಿಳಿಸಿದನು.

ಕೋಲಿಯರ ಮೇಲಿನ ಯುದ್ಧವನ್ನು ವಿರೋಧಿಸುವುದರಿಂದ ಏನೆಲ್ಲಾ ವ್ಯತಿರಿಕ್ತ ಪರಿಣಾಮಗಳು ಆಗಬಹುದು ಎಂಬುದನ್ನು ಸಿದ್ಧಾರ್ಥ ಮನಗಂಡಿದ್ದನು. ಸಿದ್ಧಾರ್ಥನ ಮುಂದೆ ಮೂರು ಪರ್ಯಾಯ ಸಾಧ್ಯತೆಗಳಿದ್ದವು. ಒಂದು ಸೈನ್ಯವನ್ನು ಸೇರಿ ಯುದ್ಧದಲ್ಲಿ ಭಾಗವಹಿಸುವುದು. ಎರಡನೆಯದಾಗಿ ಮರಣದಂಡನೆ ಅಥವಾ ಗಡಿಪಾರು ಶಿಕ್ಷೆಗೆ ಗುರಿಯಾಗುವುದು. ಮೂರನೇಯದಾಗಿ ತನ್ನ ಕುಟುಂಬದ ಸದಸ್ಯರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಈಡುಮಾಡಿ ಅವರ ಆಸ್ತಿಯನ್ನೆಲ್ಲ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶ ಮಾಡಿಕೊಡಬಹುದು. ಯುದ್ಧವನ್ನು ದೃಢವಾಗಿ ಸಿದ್ಧಾರ್ಥನು ತಿರಸ್ಕರಿಸಿದನು. ಕುಟುಂಬದ ಸದಸ್ಯರಿಗೆ ಸಾಮಾಜಿಕ ಬಹಿಷ್ಕಾರ ಸಾಧುವಲ್ಲ ಎಂದು ಅದನ್ನು ನಿರಾಕರಿಸಿದನು. ಎರಡನೇ ನಿರ್ಧಾರವೇ ಸರಿ ಎನಿಸಿತು. ಗಡಿಪಾರು ಅಥವಾ ಮರಣದಂಡನೆ ಸೂಕ್ತ ಎಂದು ಭಾವಿಸಿ ಅದನ್ನೇ ಆಯ್ಕೆ ಮಾಡಿಕೊಂಡನು. ತನ್ನ ಅಂತಿಮ ನಿರ್ಧಾರವನ್ನು ತಿಳಿಸಿದ ಸಿದ್ಧಾರ್ಥನು ಸಂಘಕ್ಕೆ ಮನವಿ ಮಾಡಿಕೊಳ್ಳುತ್ತಾ ದಯವಿಟ್ಟು ನನ್ನ ಕುಟುಂಬದವರನ್ನು ರಕ್ಷಿಸಬೇಡಿ. ಅವರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಈಡುಮಾಡಿ. ಅವರನ್ನು ಸಂಕಷ್ಟಕ್ಕೆ ಈಡು ಮಾಡಬೇಡಿ. ಅವರ ಜೀವನೋಪಾಯಕ್ಕೆ ಏಕೈಕ ಸಾಧನವಾಗಿರುವ ಭೂಮಿಯನ್ನು ಮುಟ್ಟುಗೋಲು ಹಾಕಿಕೊಂಡು ಅವರನ್ನು ನಿರಾಧಾರಿಗಳಾಗಿ ಮಾಡಬೇಡಿ. ಅವರೆಲ್ಲರೂ ಅಮಾಯಕರು. ತಪ್ಪು ಮಾಡಿರುವವನು ನಾನು. ಆ ತಪ್ಪಿಗೆ ನಾನು ಶಿಕ್ಷೆಯನ್ನು ಅನುಭವಿಸಬೇಕು. ನನ್ನನ್ನು ಗಲ್ಲಗೇರಿಸಿ ಇಲ್ಲವೇ ಗಡಿಪಾರು ಮಾಡಿ. ನಾನು ನನ್ನ ರಕ್ಷಣೆಗಾಗಿ ಕೋಸಲ ದೇಶದ ರಾಜನಿಗೆ ಯಾವುದೇ ಮನವಿಯನ್ನು ಸಲ್ಲಿಸುವದಿಲ್ಲವೆಂದು ನಾನು ವಚನ ನೀಡುತ್ತೇನೆ ಎಂದರು.

ಸಿದ್ಧಾರ್ಥ ನದಿ ನೀರಿಗಾಗಿ ನಡೆಸಿದ ಈ ಚಳುವಳಿ ಇತಿಹಾಸದಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿದೆ. ಯಾವೊಬ್ಬ ವ್ಯಕ್ತಿಯು ಈ ರೀತಿಯ ನಿರ್ಧಾರ ತೆಗೆದುಕೊಂಡಿರುವುದು. ಇದುವರೆಗೂ ಇತಿಹಾಸದಲ್ಲಿ

ದಾಖಲಾಗಿಲ್ಲ. ಎರಡೂ ದೇಶಗಳ ಜನರು ನದಿ ನೀರಿನ ಸಮಸ್ಯೆ ಶಾಂತಿಯುತವಾಗಿ ಬಗೆಹರಿಸಿಕೊಳ್ಳಲು ತನ್ನ ಜೀವನವನ್ನೇ ತ್ಯಾಗ ಮಾಡಿರುವುದು ಇದೇ ಮೊದಲು. ಅಂದರೆ ಇಂತಹದ್ದೊಂದು ಚಳುವಳಿ ಬುದ್ಧನ ಕಾಲದಲ್ಲಿ ನಡೆದಿದ್ದು ಸ್ತೂತಕಾರ್ಯ. ಸಿದ್ಧಾರ್ಥನು ಇದಕ್ಕೂ ಮೊದಲು ತನ್ನದಲ್ಲದ ಯಾವುದೇ ಒಂದು ಪಕ್ಷಿಯನ್ನು ತನ್ನ ಸಹೋದರ ಬಾಣ ಬಿಟ್ಟು ಅದನ್ನು ಗಾಯಗೊಳಸಿದ. ಅಲ್ಲದೇ ಅದು ತನಗೆ ಸೇರಿದ್ದು ಎಂದು ವಾದಿಸತೊಡಗಿದ. ಆದರೆ ಸಿದ್ಧಾರ್ಥ ಅದನ್ನು ಗಾಯಗೊಳಸಿದ್ದು ಮಹಾಪಾಪ. ಅದು ನನಗೆ ಸೇರಿದ್ದು. ಅದನ್ನು ಬದುಕಿಸುವ ಜವಾಬ್ದಾರಿ ತನ್ನದೆಂದು ನ್ಯಾಯಾಂಗ ವ್ಯವಸ್ಥೆಯ ಮೂಲಕ ಅಜೇಯನಾದ. ಆಗಲೇ ಅಹಿಂಸಾ ಚಳುವಳಿಗೆ ನಾಂದಿ ಹಾಡಿದ್ದ ಸಿದ್ಧಾರ್ಥ ಅಹಿಂಸಾ ಚಳುವಳಿಯ ರೂವಾರಿಯು ಆದ. ಆದರೆ, ನದಿ ನೀರಿನ ಸಲುವಾಗಿ ಎರಡೂ ರಾಜ್ಯಗಳ ಜನರ ಶಾಂತಿಯುತ ಬದುಕಿಗಾಗಿ ಸಾಮಾಜಿಕ ಸಾಮರಸ್ಯದ ಚಳುವಳಿಯನ್ನೇ ರೂಪಿಸದ. ಅದಕ್ಕಾಗಿ ಸಂಘ ತೊರೆದ. ಕುಟುಂಬ ತೊರೆದ. ಅಷ್ಟೇ ಅಲ್ಲ ಪ್ರಾಣವನ್ನು ತೊರೆಯುವದಕ್ಕೆ ಸಿದ್ಧನಾದ. ಆದರೆ ಕೊನೆಗೆ ಗಡಿಪಾರು ಶಿಕ್ಷೆಯನ್ನು ತಾನೇ ವಿಧಿಸಿಕೊಂಡ. ಇಂತಹದೊಂದು ಅಪರೂಪದ ಚಳುವಳಿ, ಆಂದೋಲನ, ಕ್ರಾಂತಿ ಬುದ್ಧನ ಕಾಲದಲ್ಲಿ ದಾಖಲಾಗಿದೆ.

ಗೌತಮ ಬುದ್ಧನಾಗುವ ಮುಂಚೆ ಕುಟುಂಬವನ್ನು ತೊರೆದು ಬಂದುದು ಇತಿಹಾಸ. ಬಹುಷ ಒಬ್ಬ ರಾಜಕುಮಾರ ತನ್ನ ಕುಟುಂಬವನ್ನು ಸಾಮಾಜಿಕ ತ್ಯಾಗಕ್ಕಾಗಿ ತೊರೆದದ್ದು ಇದೇ ಮೊದಲು. ಸಿದ್ಧಾರ್ಥನು ತನ್ನ ಕುಟುಂಬದ ವಿರುದ್ಧವೇ ಚಳುವಳಿ ನಡೆಸಿದ್ದು ಅನೇಕ ಅಂಶಗಳಿಂದ ತಿಳಿದು ಬರುತ್ತದೆ. ಮೊಟ್ಟ ಮೊದಲಿಗೆ ಸಿದ್ಧಾರ್ಥನು ಬಿಲ್ವಿದ್ಯೆ ಕಲಿಯಲು ನಿರಾಸಕ್ತಿ ತೋರಿಸಿದ್ದು ತಾಯಿ ಪ್ರಜಾಪತಿಯ ಮಾತನ್ನು ತಿರಸ್ಕರಿಸಿದ್ದು, ತಾಯಿ ಎಷ್ಟೇ ಪ್ರೇರೆಪಿಸಿದರೂ ಸಿದ್ಧಾರ್ಥನು ತಾಯಿಯ ಮಾತನ್ನು ಕೇಳುವುದಿಲ್ಲ. ತನ್ನ ರಾಜ್ಯವನ್ನು ರಕ್ಷಿಸಿಕೊಳ್ಳಲು ಯುದ್ಧ ಮಾಡಬೇಕಾದ ಅನಿವಾರ್ಯ ಒಬ್ಬ ರಾಜನಿಗೆ ಬರುತ್ತದೆ. ಆಗ ಆತ ಸಕಲ ವಿದ್ಯೆಗಳಲ್ಲಿ ನಿಪುಣರಾಗಿರಬೇಕು. ಆಗ ಎದುರಾಳಿಯನ್ನು ಸದೆಬಡಿಯಲು ಸಾಧ್ಯ ಎಂದು ತಾಯಿ ಪ್ರಜಾಪತಿ ಹೇಳುತ್ತಾಳೆ. ಆದರೆ, ಅದನ್ನು ಒಪ್ಪದ ಸಿದ್ಧಾರ್ಥ ತನ್ನ ತಾಯಿಗೇನೆ ಬುದ್ಧಿವಾದ ಹೇಳಿ ಅವಳ ಮಾತನ್ನು ಧಿಕ್ಕರಿಸುತ್ತಾನೆ. ನಾವು ಎಲ್ಲರನ್ನೂ ಪ್ರೀತಿಸಿದರೆ ಯುದ್ಧ ಮಾಡುವ ಸಂದರ್ಭವೇ ಬರುವುದಿಲ್ಲ. ಪ್ರೀತಿಯಿಂದ ಮಾತ್ರ ಎಲ್ಲವನ್ನು ಮತ್ತು ಎಲ್ಲರನ್ನು ಮತ್ತು ಗೆಲ್ಲಬಹುದು. ಯುದ್ಧದಿಂದ ವೈರತ್ವವೇ ಹೆಚ್ಚುತ್ತದೆ ಎಂದು ವಾದಿಸುತ್ತಾನೆ ಸಿದ್ಧಾರ್ಥ. ತನ್ನದಲ್ಲದ ಪಕ್ಷಿಯ ರಕ್ಷಣೆಗಾಗಿ ದೇವದತ್ತನ ವಿರುದ್ಧ ವೈರ ಕಟ್ಟಿಕೊಳ್ಳಬೇಕಾದ ಸಂದರ್ಭ ಸಿದ್ಧಾರ್ಥನಿಗೆ ಬರುತ್ತದೆ. ದೇವದತ್ತ ತನ್ನ ಬಾಣದಿಂದ ಪಕ್ಷಿಯನ್ನು ಕೊಂದು ಅದು ನನಗೆ ಸೇರಿದ್ದು ಎಂದು ವಾದಿಸುತ್ತಾನೆ. ಆದರೆ ಸಿದ್ಧಾರ್ಥ ಯಾರನ್ನೂ ಕೊಲ್ಲುವ ಅಧಿಕಾರ ಮನುಷ್ಯನಿಗಿಲ್ಲ. ಅದು ಅಪರಾಧ ಎಂದು ಬುದ್ಧಿ ಹೇಳುತ್ತಾನೆ. ಕೊನೆಗೆ ನ್ಯಾಯಾಂಗದ ಮೊರೆ ಹೋಗುತ್ತಾರೆ. ಸಿದ್ಧಾರ್ಥನಿಗೆ ಜಯ ಸಿಗುತ್ತದೆ. ನದಿ ನೀರಿನ ವಿಷಯದಲ್ಲೂ ಕೂಡಾ ಸಿದ್ಧಾರ್ಥ ಕುಟುಂಬದ ವಿರುದ್ಧ ಸಾಗಬೇಕಾದ ಅನಿವಾರ್ಯತೆ

ಬರುತ್ತದೆ. ಅಲ್ಲದೆ ಸಿದ್ಧಾರ್ಥನು ಮನೆ ಬಿಟ್ಟು ಹೋಗುವ ಸಂದರ್ಭದಲ್ಲಿ ತಂದೆಯ ಮಾತನ್ನು ಸಹ ಕೇಳುವುದಿಲ್ಲ. ತಂದೆ ಎಷ್ಟೇ ಪರಿಪರಿಯಾಗಿ ವಿನಂತಿಸಿದರೂ ಸಿದ್ಧಾರ್ಥ ಅದನ್ನು ಪ್ರೀತಿಯಿಂದ ನಿರಾಕರಿಸುತ್ತಾನೆ. ಹೆಂಡತಿಯ ಮಾತನ್ನು ಸಿದ್ಧಾರ್ಥ ಕೇಳುವುದಿಲ್ಲ. ಚೆನ್ನನ ಮಾತನ್ನು ಸಿದ್ಧಾರ್ಥ ಕೇಳುವುದಿಲ್ಲ. ಕೊನೆಗೆ ನದಿ ನೀರಿನ ಸಮಸ್ಯೆ ಬಗೆಹರಿದ ಮೇಲೆ ಶುದ್ಧೋಧನ ಸಿದ್ಧಾರ್ಥನಿಗೆ ಮನೆಗೆ ಬರಲು ವಿನಂತಿಸುತ್ತಾನೆ. ಮತ್ತೇ ಸಾಮ್ರಾಜ್ಯ ಮುನ್ನಡೆಸಲು ಮನವಿ ಮಾಡುತ್ತಾನೆ. ಆದರೆ ಸಿದ್ಧಾರ್ಥ ಇವೆಲ್ಲವನ್ನು ನಯವಾಗಿ ತಿರಸ್ಕರಿಸುತ್ತಾನೆ. ಇದು ಸಿದ್ಧಾರ್ಥ ತನ್ನ ಕುಟುಂಬದೊಂದಿಗೆ ನಡೆಸಿದ ಚಳುವಳಿಯಾಗಿದೆ.

**ಗ್ರಂಥಸೂಚಿ**


1. ಟಿ.ಎಂ. ಭಾಸ್ಕರ್, **ಗೌತಮಬುದ್ಧ,** ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರ್ಗಿ, 2004
2. ಸಿ.ಎಚ್.ರಾಜಶೇಖರ್, **ಬುದ್ಧ,** ಸೌಮ್ಯಶ್ರೀ ಪ್ರಕಾಶನ, ಬೆಂಗಳೂರು, 2010
3. ಜಯಶೆಟ್ಟಿ ಬಾಲಚಂದ್ರ, **ಬುದ್ಧ ಮತ್ತು ಬಸವ,** ಬಸವ ಧರ್ಮ ಪ್ರಚಾರ ಸಂಸ್ಥೆ, ಬೀದರ, 2012
4. ಸಿ.ಎಚ್.ರಾಜಶೇಖರ್, **ಬುದ್ಧನಂದನ....,** ಸೌಮ್ಯಶ್ರೀ ಪ್ರಕಾಶನ, ಬೆಂಗಳೂರು, 2011
5. ಕೆ.ಬಿ.ಚಿಕ್ಕನಾರಾಯಣಪ್ಪ, **ಬುದ್ಧವಾಣಿ,** ಮಹಾಬೋಧಿ ಸೊಸೈಟಿ, ಬೆಂಗಳೂರು, 2014
6. ವೈ.ಬಿ.ನಂದನ್, ಬುದ್ಧ ಚರಿತ್ರೆ ಮತ್ತು ಧಮ್ಮಸಾರ, ಮಹಾಬೋಧಿ ಸೊಸೈಟಿ, ಬೆಂಗಳೂರು, 2004
7. ಗಿರಿಮಾಜಿ ರುಕ್ಮಿಣಿ, ಬುದ್ಧನ ಜೀವನ ಕಥೆ, ಮಹಾಬೋಧಿ ಸೊಸೈಟಿ, ಬೆಂಗಳೂರು, 2004
8. ಜಿ.ಎಂ ಕೃಷ್ಣಮೂರ್ತಿ, ಭಗವಾನ ಬುದ್ಧ, ವಸಂತ ಪ್ರಕಾಶನ, ಬೆಂಗಳೂರು, 2012
9. ನಿರೂಪಮಾ, ಗೌತಮ ಬುದ್ಧ, ಸಪ್ನಾ ಬುಕ್ ಹೌಸ್, ಬೆಂಗಳೂರು, 2001
10. ಬಿ.ಎನ್.ರಾಜಾರಾಮ್, ಧಮ್ಮ ಪದ, ಮಹಾಬೋಧಿ ಸೊಸೈಟಿ, ಬೆಂಗಳೂರು, 1984